ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಶುಕ್ರವಾರ, ದಿನಾಂಕ ೮ನೇ ಜೂನ್ ೧೯೯೦, ಜ್ಯೇಷ್ಠ ೧೮, ೧೯೧೨ ಶಕ.

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ ೯–೧೫ ಗಂಟೆಗೆ ಸಮಾವೇಶಗೊಂಡಿತು.

[ಅಧ್ಯಕ್ಷರು (ಶ್ರೀ ಎಸ್.ಎಂ. ಕೃಷ್ಣ) ಅವರು ಪೀಠವನ್ನು ಅಲಂಕರಿಸಿದರು.]

ರೈತರ ಸಾಲ ಮನ್ನಾದ ಬಗ್ಗೆ ಪ್ರಸ್ತಾಪ

† ಶ್ರೀ ಬಿ.ಎಸ್.ಯಡಿಯೂರಪ್ಪ:—ಸನ್ಮಾನ್ಯ ಅಧ್ಯಕ್ಷರೇ, ರೈತರ ಸಾಲ ಮನ್ನಾ ಬಗ್ಗೆ ಒಂದು ಯೋಜನೆಯನ್ನು ಅನೌನ್ಸ್ ಮಾಡಿದರು. ಇದರ ಲಾಭ ಯಾರಿಗೆ ಸಿಗುತ್ತದೆ ಏನು ಸಿಗುತ್ತದೆ ಎಂಬುದು ಇನ್ನೂ ರಾಜ್ಯದ ರೈತರಿಗೆ ಸ್ಪಷ್ಟವಾಗಿಲ್ಲ. ಇದು ರೈತರ ಸಾಲ ಮನ್ನಾ ಅಲ್ಲ. ಬರಗಾಲದ ಸಾಲ ಮನ್ನಾ ಆದ ಹಾಗೆ ಆಗುತ್ತದೆ. ಯಾರಿಗೆ ಎಂಟು ಆಣೆಗಿಂತ ಕಡಿಮೆ ಬೆಳೆ ಇದೆ ಅವನಿಗೆ ಮಾತ್ರ ಸಾಲ ಮನ್ನಾ ಎಂದರೆ ಹೇಗೆ ? ಒಂದು ವಿಚಾರ ಕೇಂದ್ರ ಸರಕಾರ ಏನು ಅನೌನ್ಸ್ ಮಾಡಿತು, ರಾಜ್ಯ ಸರಕಾರದ ಮನಸ್ಸಿನಲ್ಲಿ ಏನು ಭಾವನೆ ಇತ್ತು, ೧೦ ಸಾವಿರದ ವರೆಗಿನ ಯಾವುದೇ ರೈತನ ಸಾಲ ಮನ್ನಾ ಇದರಿಂದ ಆಗುವುದಿಲ್ಲ. ಮತ್ತು ನಿನ್ನೆ ೧೨೦ ಕೋಟಿ ನಾವು ತುಂಬಬೇಕಾಗುತ್ತದೆ ಎಂದು ಸನ್ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ಇದು ೩೫–೪೦ ಕೋಟಿ ಕೂಡಾ ಆಗುವುದಿಲ್ಲ. ರಾಜ್ಯದ ಬೇಕಷ್ಟು ಒಬ್ಬ ರೈತನಿಗೂ ಇದರಿಂದ ಲಾಭವಾಗುವುದಿಲ್ಲ. ನಾನು ವಿನಂತಿ ಮಾಡುತ್ತಿರುವುದು ಈ ಪ್ರಶ್ನೋತ್ತರ ಕಾಲವನ್ನು ಬದಿಗೊತ್ತಿ ಇದನ್ನು ತೆಗೆದುಕೊಳ್ಳಬೇಕು.

ಅಧ್ಯಕ್ಷರು.—ಒಂದು ನಿಮಿಷ ಕುಳಿತುಕೊಳ್ಳಿ. ಇಂದು ಸದನದ ಮಾನ್ಯ ಸದಸ್ಯರೂ, ಸರಕಾರದ ರಾಜ್ಯ ಸಚಿವರೂ ಆಗಿರುವ ಶ್ರೀ ಎಂ.ಎಸ್ ಆತ್ಮಾನಂದ ಅವರ ಜನ್ಮ ದಿನ. ಅವರಿಗೆ ಈ ಸದನದ ಎಲ್ಲರ ಪರವಾಗಿ ಹಾರ್ದಿಕವಾದ ಶುಭಾಶಯಗಳನ್ನು ಕೋರುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ.—ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದು ಈ ಸಭೆಯ ಕಲಾಪಕ್ಕೆ ಅಡ್ಡಿ ಬರುವುದಕ್ಕೆ ನಾನು ಇಚ್ಛಿಸಲುವುದಿಲ್ಲ. ಇಡೀ ರಾಜ್ಯದ ರೈತನಿಗೆ ಇವತ್ತು ಪತ್ರಿಕೆ ನೋಡಿದಾಗ ಈ ಸವಲತ್ತು ಯಾರಿಗೆ ಸಿಗುತ್ತದೆ ಎಂದು ಗೊತ್ತಾಗುವುದಿಲ್ಲ. ಯಾರಿಗೆ ಬೆಳೆ ನಾಶವಾಗಿ ೫೦ ಭಾಗ ಅಂದರೆ ಎಂಟು ಆಣೆಗಿಂತ ಕಡಿಮೆ ಬೆಳೆ ಆಗಿದೆ ಅಂತಹವರಿಗೆ ಮಾತ್ರ ಇದು ಸಿಗುತ್ತದೆ. ೨-೧೦-೧೯೮೯ರಂದು ಯಾರು ಸುಸ್ತಿದಾರರು ಆಗಿದ್ದರು ಅವರಿಗೆ ಮಾತ್ರ ಸಿಗುತ್ತದೆ. ಯಾರು ಪ್ರಾಮಾಣಿಕವಾಗಿ ಸಾಲ ವಾಪಸ್ ಕೊಟ್ಟಿದ್ದಾರೆ ಅವರಿಗೆ ಸಿಗುವುದಿಲ್ಲ ಬೇರೆ ರಾಜ್ಯ ಸರಕಾರಗಳು ಅದು ಗುಜರಾತ್ ಇರಬಹುದು, ಮಧ್ಯಪ್ರದೇಶ ಇರಬಹುದು, ಉತ್ತರ ಪ್ರದೇಶ ಇರಬಹುದು, ಅವರೆಲ್ಲರೂ ಸಹ ಈ ಯೋಜನೆಯನ್ನು ಒಪ್ಪಿದೆ. ಬೇರೆ ಯೋಜನೆ ಕಳಂಹಿಸಿಕೊಟ್ಟು ಕೇಂದ್ರ ಸರಕಾರವನ್ನು ಒಪ್ಪಿಸಿದ್ದಾರೆ ಅದಕ್ಕೋಸ್ಕರ ಈ ಸರಕಾರವನ್ನು ವಿನಂತಿ ಮಾಡಿಕೊಳ್ಳುವುದು ಎಂದರೆ, ಈಗ ಏನು ಅನೌನ್ಸ್ ಮಾಡಿದ್ದಾರೆ ಅವತ್ತು ೧೨೦ ಕೋಟಿ ನಾವು ಕೊಡಬೇಕು ಎಂದು ಏನು ಹೇಳಿದ್ದೀರಿ ಈ ಎರಡೂ, ರಾಜ್ಯದ ರೈತರ ಕಣ್ಣಿಗೆ ಮಣ್ಣೆರಚುವ ಕೆಲಸ ಮಾಡಿದ್ದೀರಿ ಎಂದು ಹೇಳುತ್ತೇನೆ.

ಅಧ್ಯಕ್ಷರು.—ಮಾನ್ಯ ಸದಸ್ಯರು ನನ್ನ ಅನುಮತಿ ಇಲ್ಲದೆ ಮಾತನಾಡುತ್ತಿದ್ದಾರೆ. ಅವರು ಹೇಳತಕ್ಕಂಥಾದ್ದು ಯಾವುದೂ ರೆಕಾರ್ಡ್‌ಗೆ ಹೋಗುತ್ತಿಲ್ಲ.

* * *

* ಅಧ್ಯಕ್ಷರ ಆದೇಶದ ಮೇರೆಗೆ ರೆಕಾರ್ಡ್ ಮಾಡಲಿಲ್ಲ

ಶ್ರೀ ಎಂ ಪಿ. ಈಶ್ವರಪ್ಪ.—ಭಾರತದ ರೈತ, ಕರ್ನಾಟಕದ ರೈತ ಎಂದು ಪಿತಕ್ಕೆ ವ್ಯತ್ಯಾಸ ಮಾಡಿಕೊಳ್ಳಬೇಕು. ಬೇರೆ ಬೇರೆ ರಾಜ್ಯಗಳು ಅನುಕೂಲ ಮಾಡಿಕೊಟ್ಟಿವೆ. ನಮ್ಮ ರಾಜ್ಯ ಸರಕಾರ ಕಣ್ಣು ಬಿಟ್ಟು ನೋಡುತ್ತಿಲ್ಲ. ತೀರಾ ಅನ್ಯಾಯ ಮಾಡುತ್ತಿದ್ದಾರೆ.

(ಭಾರತೀಯ ಜನತಾ ಪಕ್ಷದ ಸದಸ್ಯರು ಸಭಾಧ್ಯಕ್ಷರ ಪೀಠದ ಮುಂದಿರುವ ವೆಲ್‌ನಲ್ಲಿ ಧರಣಿ ಕುಳಿತರು).

ಶ್ರೀ ಟಿ.ಎನ್. ನರಸಿಂಹಮೂರ್ತಿ.—ಒಮ್ಮೆ ಮಾತನ್ನು ಸರಕಾರದ ಪರವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಭಾರತೀಯ ಜನತಾ ಪಕ್ಷದ ಸದಸ್ಯರು ಈ ವಿಚಾರ ಪ್ರಸ್ತಾಪ ಮಾಡುತ್ತಿರುವ ಸಮಯದಲ್ಲಿ ರೈತರ ಬಗ್ಗೆ ಚಿಂತನೆ, ರೈತರ ಪ್ರಗತಿ ವಿಚಾರದಲ್ಲಿ ಕಾಂಗ್ರೆಸ್ ಪಕ್ಷ ದೊಡ್ಡ ಇತಿಹಾಸ ಹೊಂದಿರತಕ್ಕಂಥ ಪಕ್ಷ. ಈ ಪಕ್ಷ ರಾಷ್ಟ್ರಮಟ್ಟದಲ್ಲಿ ಸರಕಾರ ನಡೆಸುತ್ತಿದ್ದಾಗ ರೈತರ ಬಗ್ಗೆ ರಾಷ್ಟ್ರೀಯ ನೀತಿ ನಿರೂಪಣೆ ಮಾಡಿದೆ. ರಾಜ್ಯದಲ್ಲೂ ಕೂಡಾ ಅನೇಕ ಪ್ರಗತಿಪರವಾದ ಕಾರ್ಯಕ್ರಮಗಳನ್ನು ಕೈಗೊಂಡಿದ್ದೇವೆ. ಹೀಗೆ ಇರುವಾಗ ಮಾತಾಡ್ತಿದ್ದರೆ ಈ ಸರಕಾರ ದ್ರೋಹ ಮಾಡುತ್ತಿದೆ ಎನ್ನುವುದು ಅನುಚಿತ ಎಂದು ಹೇಳುತ್ತೇನೆ. ಇದು ನಾಗರಿಕ ಭಾಷೆ ಅಲ್ಲ ಎಂದು ಹೇಳಿದರೆ ತಾವು ತಪ್ಪು ತಿಳಿದುಕೊಳ್ಳುವುದಿಲ್ಲ ಎಂದು ಹೇಳುತ್ತೇನೆ. ನಮ್ಮ ಪಕ್ಷ ನಿನ್ನೆ ಹುಟ್ಟಿದ ಪಕ್ಷ ಅಲ್ಲ. ನೂರಾರು ವರ್ಷಗಳ ಇತಿಹಾಸ ಇರತಕ್ಕಂಥ ಪಕ್ಷ. ರಾಷ್ಟ್ರದ ರೈತರು ಈ ಪಕ್ಷಕ್ಕೆ ಬೆನ್ನೆಲುಬಾಗಿ ಇರತಕ್ಕಂಥಾದ್ದನ್ನೂ ಕೂಡ ಈ ಸಂದರ್ಭದಲ್ಲಿ ಸ್ಮರಣೆ ಮಾಡಿಕೊಳ್ಳಬೇಕೆಂದು ಈ ಮಾತನ್ನು ಹೇಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ.—ಮಾನ್ಯ ಅಧ್ಯಕ್ಷರೇ, ಒಂದು ಮಾತು. ಅವರ ಮಾತು ರೆಕಾರ್ಡ್‌ನಲ್ಲಿ ಹೋಗಿದೆ.

ಶ್ರೀ ಟಿ.ಎನ್. ನರಸಿಂಹಮೂರ್ತಿ.—ಕೇಂದ್ರದಲ್ಲಿ ಆಡಳಿತ ನಡೆಸಿದಂಥ ಈ ಪಕ್ಷ ಅತ್ಯಧಿಕವಾದ ಬೆಂಬಲವನ್ನು ಪಡೆದಿರತಕ್ಕಂಥ ಪಕ್ಷ ಎಂಬ ಮಾತನ್ನು ಹೇಳುತ್ತಿದ್ದೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ.—ಸನ್ಮಾನ್ಯ ಅಧ್ಯಕ್ಷರೇ, ಬಿ.ಜೆ.ಪಿ, ಸದಸ್ಯರಾಗಿರತಕ್ಕಂಥ ಮಾನ್ಯ ಯಡಿಯೂರಪ್ಪನವರು ಮತ್ತು ಅವರ ಸ್ನೇಹಿತರುಗಳು, ರೈತರ ಸಾಲ ಮಾನ್ಯ ಮಾಡುವ ಪ್ರಶ್ನೆಯ ಬಗ್ಗೆ ನಿನ್ನೆಯಿಂದ ಈ ಸದನದಲ್ಲಿ ಧರಣಿ ಕುಳಿತಿದ್ದಾರೆ. ರಾಜ್ಯ ಮಟ್ಟದಲ್ಲಿ ಹೇಳಬೇಕೆಂದರೆ, ಅವರು ಆಡಳಿತ ಪಕ್ಷಕ್ಕೆ ವಿರೋಧದಲ್ಲಿರತಕ್ಕಂಥವರು. ಅವರು ಈ ಸದನದಲ್ಲಿ ಧರಣಿ ಕುಳಿತಿರುವಾಗ ನಾವು ಕುಳಿತುಕೊಂಡು ಕಲಾಪದಲ್ಲಿ ಭಾಗವಹಿಸತಕ್ಕಂಥಾದ್ದು ಸ್ವಲ್ಪ ಮುಜುಗರವಾಗುತ್ತದೆ. ಆದರೆ ಯಡಿಯೂರಪ್ಪನವರು ಈ ಸಭೆಗೆ ಬರುವುದಕ್ಕೆ ಮುಂಚೆ ಅವರನ್ನು ನಾನು ಮತ್ತು ಪಕ್ಷೇತರ ಸದಸ್ಯರಾದ ವಾಟಾಳ್ ನಾಗರಾಜ್‌ರವರು ಜನತಾ ಪಕ್ಷದ ಸದಸ್ಯರಾದ ವೆಂಕಟೇಶ್‌ರವರು ಭೇಟಿ ಮಾಡಿ, ಅವರಲ್ಲಿ ಮನವಿ ಮಾಡಿಕೊಂಡಿದ್ದೇವೆ. ತಾವು ದಯವಿಟ್ಟು ಧರಣಿ ಮಾಡುವುದು ಬೇಡ. ಧರಣಿ ಮಾಡುವುದರಿಂದ ನಾವು ಏನು ಕಾರ್ಯ ಸಾಧನೆ ಮಾಡಬೇಕೆಂದಿದ್ದೇವೆ ಅದು ಆಗುವುದಿಲ್ಲ ಎಂಬ ಮಾತನ್ನು ಅವರ ಗಮನಕ್ಕೆ ತಂದಿದ್ದೇವೆ. ನಮ್ಮನ್ನು ಅವರು ಟೀಕೆ ಮಾಡಿದ್ದಾರೆ. ಟೀಕೆ ಮಾಡತಕ್ಕಂಥ ಹಕ್ಕು ಅವರಿಗೆ ಇದೆ. ಅವರ ಹಂಗು ಹಾಗೂ ಮುಲಾಜಿನಲ್ಲಿ ನಾವು ಇವತ್ತು ಕೇಂದ್ರ ಸರಕಾರವನ್ನು ನಡೆಸುತ್ತಿದ್ದೇವೆ. ಹಾಗೆಂದ ತಕ್ಷಣ ಕೇಂದ್ರ ಸರಕಾರ ಏನು ಒಂದು ರೈತರ ಸಮುದಾಯಕ್ಕೆ ಅನುಕೂಲ ಮಾಡಬೇಕೆಂಬ ದೃಷ್ಟಿಯಿಂದ ಒಂದು ಕಾರ್ಯಕ್ರಮ ಹಾಕಿಕೊಂಡಿದೆ. ಆ ಕಾರ್ಯಕ್ರಮ ಜಾರಿಗೆ ತರುವುದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಒಪ್ಪಿದ್ದಾರೆ ಅದನ್ನು ನಾವು ಸ್ವಾಗತ ಮಾಡಿರತಕ್ಕಂಥಾದ್ದು ನಿಜ ಸ್ವಾಗತ ಮಾಡಬೇಕಾಗುತ್ತದೆ. ಇಲ್ಲದಿದ್ದರೆ ಅದು ಅಸೌಜನ್ಯದ ಪರಮಾವಧಿಯಾಗುತ್ತದೆ. ಅದನ್ನು ಸ್ವಾಗತ ಮಾಡಿದ್ದೇವೆ. ರೈತರ ಸಮುದಾಯಕ್ಕೆ ಸಹಾಯ ಮಾಡಬೇಕೆಂಬುದು ನಮ್ಮ ನಿಮ್ಮ ಎಲ್ಲರ ಉದ್ದೇಶವಾಗಿದೆ. ನಾನು ನಿಮ್ಮಲ್ಲಿ ಮನವಿ ಮಾಡಿಕೊಳ್ಳುವುದು ಏನೆಂದರೆ ರಾಷ್ಟ್ರೀಯರಂಗದ ಸರಕಾರ ರೈತರ ಕಣ್ಣಿಗೆ ಮಣ್ಣೆರಚುವುದಕ್ಕೆ ಪ್ರಯತ್ನ ಮಾಡುತ್ತಿದೆ, ರೈತರಿಗೆ ಏನೂ ಸಹಾಯ ಮಾಡಿಲ್ಲ ಎಂದರೆ ಅದು ತಪ್ಪಾಗುತ್ತದೆ. ಈ ವೇದಿಕೆಯಲ್ಲಿ ಹೇಳುವ ಮಾತೂ ಅದಲ್ಲ.

ಅದು ಈ ವೇದಿಕೆಯಲ್ಲಿ ಹೇಳತಕ್ಕಂಥ ಮಾತಲ್ಲ. ನಾವೂ, ನೀವೂ ಒಟ್ಟಿಗೆ ಹೋಗಿ, ರಾಷ್ಟ್ರೀಯ ರಂಗದ ಸರ್ಕಾರದ ಮೇಲೆ ಒತ್ತಡವನ್ನು ತರೋಣ. ನೀವು ಕೇಂದ್ರ ಸರ್ಕಾರದಲ್ಲಿ ಇಲ್ಲದೇ ಹೋದರೂ ಸಹಿತ, ಅಲ್ಲಿರತಕ್ಕಂಥ ಸರ್ಕಾರದ ನೀತಿ ನಿರೂಪಣೆಗಳಲ್ಲಿ ಪ್ರಮುಖವಾದ ಪಾತ್ರವನ್ನು ವಹಿಸಿರತಕ್ಕಂಥವರು. ಆದುದರಿಂದ ದಯವಿಟ್ಟು ಈ ವೇದಿಕೆಯನ್ನು ಕೇಂದ್ರ ಸರ್ಕಾರವನ್ನು ಟೀಕೆ ಮಾಡುವುದಕ್ಕೆ ಉಪಯೋಗ ಮಾಡತಕ್ಕಂಥ ಅಗತ್ಯ ಇಲ್ಲ. ಕೇಂದ್ರ ಸರ್ಕಾರ ತಾವು ಹೇಳಿದಹಾಗೆ ರೈತ

ವಿರೋಧಿ ಆಗಿದ್ದರೆ, ಈ ಕಾರ್ಯಕ್ರಮ ಮಾಡತಕ್ಕಂಥ ಅಗತ್ಯ ಇರಲಿಲ್ಲ. ಇದರಿಂದಾಗಿ ತಾವು ದಯಮಾಡಿ, ಮಾನ್ಯ ಮುಖ್ಯ ಮಂತ್ರಿಗಳು, ಸಭಾನಾಯಕರಾಗಿ ನಮ್ಮೆಲ್ಲರನ್ನೂ ವಿನಂತಿ ಮಾಡಿಕೊಂಡಿದ್ದರೆ. ನಾವೆಲ್ಲರೂ ಹಣ ತೆಗೆದುಕೊಂಡು ಬರುವುದಕ್ಕೆ ಡೆಲ್ಲಿಗೆ ಹೋಗೋಣ, ಸರ್ಕಾರದ ಮೇಲೆ ಒತ್ತಡವನ್ನು ತರೋಣವೆಂದು ಹೇಳುತ್ತೇನೆ. ಕಳೆದ ೪ ತಿಂಗಳಿಂದ ಬಿ. ಜೆ. ಪಿ. ಪಕ್ಷ ರೈತರ ಪರವಾಗಿರತಕ್ಕ ಪಕ್ಷ ಎಂದು ತೋರಿಸಿಕೊಟ್ಟಿದ್ದೀರಿ ರಾಜ್ಯಾದ್ಯಂತ ಕಳೆದ ೪ ತಿಂಗಳುಗಳ ಕಾಲ ದೊಡ್ಡ ಹೋರಾಟ ಮಾಡಿದ್ದೀರಿ. ರೈತರ ಪ್ರತಿನಿಧಿಗಳು ಎನ್ನುವುದಕ್ಕೆ ಸಾಕಷ್ಟು ಪ್ರಚಾರ ಪಡೆದಿದ್ದೀರಿ. ಪ್ರಜಾಪ್ರಭುತ್ವದಲ್ಲಿ ಪ್ರಚಾರ ಬಹಳ ಮುಖ್ಯ ಆದನ್ನು ತಾವು ಗಳಿಸಿದ್ದೀರಿ ಆದ್ದರಿಂದ, ನಾನು ನಮ್ಮ ವಿರೋಧಪಕ್ಷದ ಎಲ್ಲಾ ಮಿತ್ರರ ಪರವಾಗಿ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಈ ಸದನದಲ್ಲಿ ಧರಣಿ ಕುಳಿತುಕೊಳ್ಳುವುದರಿಂದ, ನನಗನಿಸುತ್ತದೆ, ಏನು ಸಾಧನೆ ಮಾಡಬೇಕೋ. ರೈತರಿಗೆ ಏನು ಸಹಾಯ ಮಾಡಬೇಕೆಂದು ಇದ್ದೀರಿ, ಅದು ಆಗುವುದಿಲ್ಲ. ನೀವು ೪ ಜನ ಸದಸ್ಯರೂ ಇಲ್ಲಿ ಕಾರ್ಯ ಕಲಾಪಗಳನ್ನು ಸುಗಮವಾಗಿ ನಡೆಸುವುದಕ್ಕೆ ಅಧ್ಯಕ್ಷರಿಗೆ ತಾವು ಸಹಾಯ ಮಾಡಬೇಕು. ನಾವು ಸರ್ಕಾರದ ವಿರುದ್ಧ ಪ್ರತಿಭಟನೆ ಮಾಡೋಣ ಎನ್ನುವ ಮಾತನ್ನು ತಮ್ಮ ಮೂಲಕ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್.— ಮಾನ್ಯ ಅಧ್ಯಕ್ಷರೇ, ಅವರು ಇವತ್ತು ಒಂದು ದಿವಸ ಈ ಸಭೆ ಸಂಪೂರ್ಣವಾಗಿ ನಡೆಯುವವರೆಗೆ ಧರಣಿ ಕುಳಿತಿರುತ್ತೇವೆ ಎಂಬ ತೀರ್ಮಾನ ಮಾಡಿದ್ದಾರೆ. ನಮ್ಮ ಮಿತ್ರರು ಬೆಳಿಗ್ಗೆ ಯಡಿಯೂರಪ್ಪನವರ ಜೊತೆ ಮಾತನಾಡಿ ಏನಾದರೊಂದು ಸೂತ್ರವನ್ನು ಕಂಡುಹಿಡಿಯೋಣ ಎಂದಿದ್ದೆವು. ನಿನ್ನೆ ಮುಖ್ಯ ಮಂತ್ರಿಗಳು ಕಳಕಳಿಯಿಂದ ಏನು ಹೇಳಿದ್ದಾರೆ, ಮಾನ್ಯ ಯಡಿಯೂರಪ್ಪನವರಿಗೆ ಅವರ ಕಳಕಳಿಯಲ್ಲಿ ನಂಬಿಕೆ ಇಲ್ಲ ಎನ್ನುವಾದ ಸಭೆಯಲ್ಲಿ ಧರಣಿ ಮಾಡುತ್ತಿರುವಾಗಲೂ ಸಭೆಯನ್ನು ನಡೆಸಬಹುದು ಎಂಬ ತೀರ್ಪನ್ನು ತಾವು ಕೊಟ್ಟಿದ್ದೀರಿ. ಆದರೂ ಕೂಡ ಒಂದು ಕಡೆ ಧರಣಿ, ಇನ್ನೊಂದು ಕಡೆ ವಿರೋಧ ಪಕ್ಷದಲ್ಲಿ ಕುಳಿತು. ಇಲ್ಲಿ ಕೆಲಸ ಮಾಡುವುದು ಮನಸ್ಸಿನಲ್ಲಿ ಒಂದು ರೀತಿಯ ಗೊಂದಲ. ನನಗನಿಸುತ್ತದೆ ತಮ್ಮ ಕಾರ್ಯಾಲಯದಲ್ಲಿ ಕುಳಿತು ಆ ಕಡೆ ಇರತಕ್ಕಂಥವರು, ಈ ಕಡೆ ಇರತಕ್ಕಂಥವರು ಮಾತುಕತೆ ಮಾಡಿ ಒಂದು ಸೂತ್ರವನ್ನು ಕಂಡುಹಿಡಿಯಬೇಕು. ಎಂದರೆ, ಈ ವಿಚಾರವಾಗಿ ಒಂದು ಸದನದ ಸಮಿತಿಯನ್ನು ನೇಮಕ ಮಾಡಿ, ಆ ಸಮಿತಿ ದೇಶದ ಬೇರೆ ಬೇರೆ ರಾಜ್ಯಗಳಿಗೆ ಹೋಗಿ ನೋಡಿ, ಎಲ್ಲೆಲ್ಲಿ ಏನೇನು, ಈ ಸಾಲದ ಬಗ್ಗೆ ವ್ಯವಸ್ಥೆ ಮಾಡಿದ್ದಾರೆ ಎನ್ನುವುದನ್ನು ಸರ್ಕಾರದವರಿಗೆ ಸಲಹೆ ಮಾಡಲಿ. ಈ ರೀತಿ ಮಾಡುತ್ತೇವೆಂದು ಮಾನ್ಯ ಯಡಿಯೂರಪ್ಪನವರಿಗೆ ಆಶ್ವಾಸನೆ ಕೊಡುವುದಾದರೆ, ನನಗನಿಸುತ್ತದೆ ಈ ಧರಣಿ ಅಂತ್ಯವಾಗುತ್ತದೆಂದು ಇದೇನೂ ಬಹಳ ದೊಡ್ಡ ವಿಚಾರ ಅಲ್ಲ. ಒಂದು ಸಮಿತಿ ನೇಮಕ ಮಾಡಿ, ಮಧ್ಯಪ್ರದೇಶದಲ್ಲಿ ಏನಾಗಿದೆ, ಉತ್ತರಪ್ರದೇಶದಲ್ಲಿ ಏನಾಗಿದೆ, ಬೇರೆ ಬೇರೆ ರಾಜ್ಯಗಳಲ್ಲಿ ಸಾಲದ ಒಗ್ಗೆ ಯಾವ ನೀತಿ ನಿರೂಪಣೆ ಮಾಡಿದ್ದಾರೆ ಎನ್ನುವುದನ್ನು ತಿಳಿದು, ಆ ಸಮಿತಿಯವರು ಸರ್ಕಾರಕ್ಕೆ ಒಂದು ವರದಿಯನ್ನು ಕೊಡುವುದಾದರೆ ಅವರು ಇದನ್ನು ಒಪ್ಪುತ್ತಾರೆಂದು ನನಗೆ ಅನಿಸುತ್ತದೆ. ಇದಕ್ಕೆ ತಾವು ಅವಕಾಶ ಮಾಡಿಕೊಟ್ಟರೆ ಬಹಳ ಸಂತೋಷ. ತಮ್ಮ ಸ್ಥಾನದಲ್ಲಿ ಉಪಾಧ್ಯಕ್ಷರನ್ನು ಕೂಡಿಸಿ, ತಮ್ಮ ಕಾರ್ಯಾಲಯಕ್ಕೆ ಬಂದು ವಿಚಾರ ಮಾಡಿ ಒಂದು ತೀರ್ಮಾನಕ್ಕೆ ಬಂದರೆ, ತಿಳಿ ವಾತಾವರಣ ಆಗುತ್ತದೆ ಎಂದು ತಮ್ಮಲ್ಲಿ ಸಲಹೆ ಕೊಡುತ್ತಿದ್ದೇನೆ.

ಶ್ರೀ ಬಿ. ಎಂ. ಇದಿನಬ್ಬ.— ಮಾನ್ಯ ಅಧ್ಯಕ್ಷರೇ, ಶ್ರೀ ಸಿಂಧ್ಯರವರು ಹೇಳಿದಂಥ ಅಭಿಪ್ರಾಯ ಬಹಳ ಚೆಲೋ ಆಗಿದೆ. ಮಾನ್ಯ ವಾಟಾಳ್‌ರವರೂ ಕೆಲವು ವಿಚಾರಗಳನ್ನು ಹೇಳಿದ್ದಾರೆ. ನಿನ್ನೆ ಮುಖ್ಯಮಂತಿ ಗಳು ಬಹಳ ವಿಸ್ತಾರವಾಗಿ ಬಹಳ ಸೌಹಾರ್ದಯುತವಾಗಿ, ವಿಚಾರ ಪೂರಿತವಾಗಿ ನಮಗೆಲ್ಲರಿಗೂ ಮನದಟ್ಟಾಗುವಂತೆ, ಒಂದೂವರೆ ಗಂಟೆಗಳ ಕಾಲ ಮಾತನಾಡಿದ್ದಾರೆ ಅವರು ಎಲ್ಲಾ ರಾಜ್ಯಗಳ ವರದಿಗಳನ್ನು ತರಿಸಿಕೊಂಡು ಇಲ್ಲಿ ಓದಿ ಹೇಳಿದ್ದಾರೆ. ಮಾನ್ಯ ಬೈರೇಗೌಡರಂಥ ಮುಖಂಡರೂ ಕೂಡ ೨-೩ ಹೆಜ್ಜೆ ಮುಂದೆ ಬಂದಿದ್ದಾರೆಂದು ಹೇಳಿದ್ದಾರೆ. ಈ ರೀತಿ ಎಲ್ಲರೂ ಒಪ್ಪಿಗೆ ಕೊಟ್ಟಿರುವಾಗ ..ಣ್ಣೆ ಬರುವಾಗ ..ಣ ಮುರಿಯಿತು'' ಎಂದು ಹೇಳತಕ್ಕ ಪರಿಸ್ಥಿತಿ ಸರಿಯಿಲ್ಲ ಮಾನ್ಯ ಮುಖ್ಯ ಮಂತ್ರಿಗಳು ಏನು ಹೇಳಿದ್ದಾರೆ, ಅದರಲ್ಲಿ ಯಾವುದೇ ಬೇರೆ ಅಭಿಪ್ರಾಯವಿಲ್ಲವೆಂದು ಹೇಳುತ್ತೇನೆ.

ಶ್ರೀ ಎಂ. ಪಿ ವೆಂಕಟೇಶ್.— ನಿನ್ನೆತಾನೆ ಉಪ ಪ್ರಧಾನಿಯವರು ೧೦ ಸಾವಿರ ರೂಪಾಯಿಗಳ ಸಾಲ ಮನ್ನಾ ಮಾಡಿದ್ದೇವೆಂದು ಹೇಳಿದ್ದಾರೆ ಇವರು ಕೇಂದ್ರಸರ್ಕಾರದ ವರದಿ ತರಿಸಿಕೊಂಡಿರುವುದು ೧೦ ದಿವಸಗಳ ಕೆಳಗೆ ಎಂದು ಹೇಳಿದ್ದಾರೆ ಇವತ್ತು ಪತ್ರಿಕೆಯಲ್ಲಿ ಬಂದಿದೆ, ೧೮ ಸಾವಿರ ರೂಪಾಯಿಗಳ ಸಾಲವನ್ನು ಸಂಪೂರ್ಣವಾಗಿ ಮನ್ನಾ ಮಾಡಿದ್ದೇವೆಂದು ಉಪ ಪ್ರಧಾನಿಯವರು ಹೇಳಿದ್ದಾರೆ

ಅಧ್ಯಕ್ಷರು.— ಉಪ ಪ್ರಧಾನರೆಂದರೆ ಮಂಡಲ ಪಂಚಾಯತಿಗಳಿಗೆ ಅನ್ವಯಿಸುತ್ತದೆ. ಸರಿಯಾಗಿ ಉಪ ಪ್ರಧಾನ ಮಂತ್ರಿಗಳು ಎಂದು ಹೇಳಿ.

ಶ್ರೀ ಎಂ. ಪಿ. ವೆಂಕಟೇಶ್.— ಆಯಿತು ಸ್ವಾಮಿ, ಇತರೆ ರಾಜ್ಯಗಳಿಂದ ಇನ್ನು ಕೆಲವು ವರದಿಗಳು ಈ ಬಗ್ಗೆ ಬಂದಿಲ್ಲ, ಅದಕ್ಕೆ ಅದು ಬಂದನಂತರ ತೀರ್ಮಾನ ತೆಗೆದುಕೊಳ್ಳಬೇಕೆಂದು ಮಾನ್ಯ ಮಾಟಾಳ್ ನಾಗರಾಜ್‌ರವರು ಹೇಳಿದ್ದಾರೆ. ಅದು ಸೂಕ್ತವಾಗಿದೆ. ಅವರು ಏನು ಹೇಳುತ್ತಿದ್ದಾರೆಂದರೆ, ಒಂದು ತಿಂಗಳ ಮಟ್ಟಿಗೆ ಸಾಲ ವಸೂಲಿ ನಿಲ್ಲಿಸೋಣ ಆಮೇಲೆ ತೀರ್ಮಾನ ತೆಗೆದುಕೊಳ್ಳೋಣ ಎಂದು ಅಲ್ಲಿಯವರಿಗೆ ನೀವು ಸಾಲ ವಸೂಲು ಮಾಡುವುದನ್ನು ನಿಲ್ಲಿಸಿ, ಆಮೇಲೆ ನಿರ್ಧಾರ ಮಾಡೋಣ ೧೦ ಸಾವಿರ ರೂಪಾಯಿಗಳ ಸಾಲವನ್ನು ಸಂಪೂರ್ಣ ಮನ್ನಾ ಮಾಡಿದ್ದೇವೆಂದು ಬಂದಿದೆ. ರಾಜ್ಯಕ್ಕೆ ಹಲವಾರು ರೀತಿಯಿಂದ ಹಣ ಬರುವುದು ಇದೆ. ಅದನ್ನು ಚರ್ಚೆ ಮಾಡುವುದು ಸೂಕ್ತ ತಾವು ವಿರೋಧ ಪಕ್ಷದಲ್ಲಿದ್ದವರು ಈ ರೀತಿ ಮಾತನಾಡುವುದು ಸರಿಯಲ್ಲ.

ಶ್ರೀ ಎಂ. ಡಿ. ನಂಜುಂಡಸ್ವಾಮಿ.— ಮಾನ್ಯ ಅಧ್ಯಕ್ಷರೆ, ನಿನ್ನೆ ಕೇಂದ್ರಸರ್ಕಾರದವರು ಕಳುಹಿಸಿರತಕ್ಕ ಸ್ಕೀಮ್ ಬಹಳ ಜಾಣತನದ್ದು ಏಕೆಂದರೆ ಅದು ಜಾರಿಗೆ ತರಲಿಕ್ಕೆ ಸಾಧ್ಯವಿಲ್ಲ. ಇದ ಕಾರಣ ಸಮ್ಮಿಶ್ರ ಜಾಣ ಮುಖ್ಯ ಮಂತ್ರಿಗಳು ಒಪ್ಪಿದ್ದಾರೆ ಎಂದು ನಿನ್ನೆ ತಾನೆ ಹೇಳಿದ್ದಾರೆ, ಮಾನ್ಯ ಯಡಿಯೂರಪ್ಪನವರು ಅದನ್ನೇ ಹೇಳುತ್ತಿದ್ದಾರೆ. ಒಬ್ಬರಿಗೂ ಅನುಕೂಲವಾಗುವುದಿಲ್ಲ. ಆ ಕಾರಣದಿಂದ ನಾನು ಯಡಿಯೂರಪ್ಪನವರಿಗೆ ಒಂದು ಸಲಹೆ ಕೊಡುತ್ತೇನೆ. ಅವರಿಗೆ ಎರಡು ಮಾರ್ಗ ಇದೆ. ನಾವೇನೋ ಒಂದು ಮಾರ್ಗದ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ನಮಗೇನೂ ಪರಿಹಾರ ಸಿಕ್ಕಿಲ್ಲ. ನೀವು ಚಳುವಳಿ ಪ್ರಾರಂಭ ಮಾಡುವುದಿಲ್ಲ. ಎರಡುತರಹ ಚಳುವಳಿಯು ನಿಮಗೆ ಸಾಧ್ಯತೆ ಉಂಟು. ಒಂದನೆಯದು ರಾಜ್ಯದ ರೈತರ ಜೊತೆಯಲ್ಲಿ ಹೋರಾಟ ಮಾಡುವುದು ಮತ್ತು ಇನ್ನೊಂದು ಯಡಿಯೂರಪ್ಪನವರು ಕೇಂದ್ರದ ನಾಯಕರ ವಿರುದ್ಧ ಚಳುವಳಿ ಮಾಡಿ ನಮ್ಮ ರಾಜ್ಯದ ಎಲ್ಲಾ ರೈತರಿಗೆ ಪರಿಹಾರ ಕೊಡಿಸುವುದು. ಇದು ರಾಷ್ಟ್ರದಲ್ಲಿ ಆದಮೇಲೆ ಇಲ್ಲಿಯೂ ಆಗುತ್ತದೆ. ಅಷ್ಟು ನನ್ನ ಸಲಹೆ.

ಅಧ್ಯಕ್ಷರು.— ನಿಮ್ಮ ಸಲಹೆ ಸೂಕ್ತವಾಗಿದೆ.

ಶ್ರೀ ಬಿ. ಹೆಚ್. ಬನ್ನಿಕೋಡ್.— ಮಾನ್ಯ ಅಧ್ಯಕ್ಷರೆ, ನನ್ನ ವಿನಂತಿ ಕೇಂದ್ರ ಸರ್ಕಾರ ಹಾಕೊಂಡಿರತಕ್ಕ ಒಂದು ಕಾರ್ಯಕ್ರಮಕ್ಕೆ ನಮ್ಮ ಮುಖ್ಯ ಮಂತ್ರಿಗಳು ಒಪ್ಪಿಕೊಂಡಿದ್ದಾರೆ. ಆದರೆ ಸಮಗ್ರವಾಗಿ ರಾಜ್ಯದ ರೈತರಿಗೆ ಇವತ್ತು ಪರಿಹಾರ ಸಿಗುತ್ತದೆಂದು ವಿರೋಧ ಪಕ್ಷದವರಾಗಲಿ ಯಾರ ಸದಸ್ಯರೂ ಈ ಸದನದಲ್ಲಿ ಹೇಳಿಲ್ಲ. ಸಮಗ್ರವಾಗಿ ರೈತರ ೧೦ ಸಾವಿರ ರೂಪಾಯಿಯಂದರೆಗಿನ ಸಾಲವನ್ನು ಕರಾರು ರಹಿತವಾಗಿ ಮನ್ನಾ ಮಾಡುವಂತೆ ರೈತರ ಮನಸ್ಸಿನಲ್ಲಿದೆ, ಸರ್ಕಾರ ಹಾಕಿಕೊಂಡಂಥ ನೀತಿ ನಿಯಮಗಳಿಗೆ ಅನುಗುಣವಾಗಿ ಮುಖ್ಯ ಮಂತ್ರಿಗಳು ಅದನ್ನು ಪಾಲನೆ ಮಾಡಲಿಕ್ಕೆ, ಅದನ್ನು ಕಾರ್ಯರೂಪಕ್ಕೆ ತರಲಿಕ್ಕೆ ಒಪ್ಪಿಕೊಂಡಿದ್ದಾರೆ. ಕರಾರು ಬಾಹಿರವಾದಂಥ ೧೦ ಸಾವಿರ ರೂಪಾಯಿಗಿಂತ ಹೆಚ್ಚಿನ ಎಲ್ಲಾ ರೈತರ ಸಾಲವನ್ನು ಮನ್ನಾ ಮಾಡಬೇಕು. ಅದು ನೀರಾವರಿ ಇರಬಹುದು, ನೀರಾವರಿ ಇಲ್ಲದೆ ಇರಬಹುದು, ಬರಗಾಲ ಇರಬಹುದು ಯಾವುದೇ ಇದ್ದರೂ ಸಹಿತ ೧೦ ಸಾವಿರ ರೂಪಾಯಿವರೆಗಿನ ಎಲ್ಲಾ ಸಾಲವನ್ನು ಕೇಂದ್ರ ಸರ್ಕಾರ ಮನ್ನಾ ಮಾಡಲಿಕ್ಕೆ ಒಪ್ಪಿಕೊಂಡರೆ ನಮ್ಮ ರಾಜ್ಯ ಸರ್ಕಾರ ಸಹಿತ ಅದನ್ನು ಕಾರ್ಯರೂಪಕ್ಕೆ ತರುತ್ತದೆಂದು ಮುಖ್ಯಮಂತ್ರಿಗಳು ಹೇಳಿದ್ದಾರೆ. ಈ ಸದನದಲ್ಲಿ ಸರ್ವಾನುಮತದ ಒಂದು ನಿರ್ಣಯವನ್ನು ತೆಗೆದುಕೊಂಡು ಕೇಂದ್ರಸರ್ಕಾರಕ್ಕೆ ನಾವು ಕಳುಹಿಸಿಕೊಟ್ಟು ಅದನ್ನು ಅವರು ಒಪ್ಪಿದರೆ ಅದನ್ನು ರಾಜ್ಯ ಸರ್ಕಾರ ಕಾರ್ಯರೂಪಕ್ಕೆ ತರಬಹುದು. ಆಗ ನಮ್ಮ ಯಡಿಯೂರಪ್ಪನವರು ಹಾಕಿಕೊಂಡಿರತಕ್ಕ ಕಾರ್ಯಕ್ರಮಕ್ಕೆ ನಿಜವಾಗಿಯೂ ಅರ್ಥ ಬರುತ್ತದೆ. ರೈತರ ಹಿತಕ್ಕೆ ಅನುಕೂಲವಾಗುತ್ತದೆಂದು ಹೇಳಿ ಈ ದೇಶದ ರೈತರಿಗೆ ಒಂದು ಒಳ್ಳೆಯ ಕಾಲ ಬರುತ್ತದೆಂದು ಹೇಳಿ ಧರಣಿಯನ್ನು ಮುಗಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.— ನನಗೆ ರೈತರ ಸಮಸ್ಯೆ ಬಗ್ಗೆ ಏನೆಂದು ಗೊತ್ತಿರುವುದರಿಂದ ತಮ್ಮ ಮೂಲಕ ಸರ್ಕಾರಕ್ಕೆ ಒಂದು ಮಾತನ್ನು ಕೇಳಲಿಕ್ಕೆ ಇಚ್ಛಿಸುತ್ತೇನೆ. ತಾವು ನಾವು ತೆಗೆದುಕೊಳ್ಳುವ ರೀತಿ ಸರಿಯಿಲ್ಲವೆಂದು ಹೇಳಿದರೆ ನಾನು ಹೋಗಿ ವಿಧಾನಸೌಧದ ಹೊರಗೆ ಬಾಗಿಲಿನಲ್ಲಿ ಕುಳಿತುಕೊಳ್ಳುವುದಕ್ಕೆ ಅನುಮತಿ ಕೊಟ್ಟರೆ ಕುಳಿತುಕೊಳ್ಳುತ್ತೇನೆ. ನಿನ್ನೆ ನಮ್ಮ ಪ್ರಾಮುಖ್ಯ ಮುಖ್ಯ ಮಂತ್ರಿಗಳು ಈಗಿರುವ ಬೋಜನೆಯ ಲ್ಲಿ ೧೫೦ ಕೋಟಿ ನಮ್ಮ ಮೈಮೇಲೆ ಬೀಳುತ್ತದೆಂದು ಹೇಳಿದ್ದಾರೆ. ಆ ಭಾರವನ್ನು ಕೇಂದ್ರ ಸರ್ಕಾರ ಪಹಿಸಿಕೊಂಡರೆ ಮಾತುಕ್ತೀವೆಂದು ಕಂಡೀಷನ್ ಮೂಲಕ ಇದನ್ನು ಮಾಡಿದ್ದಾರೆ ನಾನು ತಮ್ಮ ಮೂಲಕ ಸರ್ಕಾರವನ್ನು ವಿನಂತಿಸಿಕೊಳ್ಳು

ವುದೇನೆಂದರೆ, ನಮ್ಮ ಸರ್ಕಾರದ ೧೨೦ ಕೋಟಿ ಮತ್ತು ಕೇಂದ್ರ ಸರ್ಕಾರವು ಕೊಡುವ ೧೨೦ ಕೋಟಿ, ಒಟ್ಟು ೨೪೦ ಕೋಟಿ. ನಾವು ಈಗ ಎಂಕಿ ಅಂಶದ ಮೂಲಕ ಪ್ರತಿಯೊಂದು ಜಿಲ್ಲೆಯಲ್ಲಿ ಈಗಿರುವ ಆಣೆವಾರು ೫೦ ಒಳಭಾಗ ಇರುವ ರೈತ ಮತ್ತು ಡಿಫಾಲ್ಟರ್ ಆಗದೆ ಇರುವಂಥ ರೈತ, ಇವರ ಸಾಲ ೨೪೦ ಕೋಟಿ ರೂಪಾಯಿ ಆಗುತ್ತದೆ ಎಂದೇ ಹೇಳಿ ಪ್ರೂವ್ ಮಾಡಿದರೆ ನಾನು ಈ ಸದನದಲ್ಲಿ ಕ್ಷಮಾಪಣೆಯನ್ನು ಕೇಳಿ ವಾಪಸ್ಸು ಬರುತ್ತೇನೆ ಕೇಂದ್ರ ಸರ್ಕಾರದಿಂದ ಬಂದಂಥ ಯೋಜನೆಯನ್ನು ಎಲ್ಲಾ ಶಾಸಕರಿಗೂ ಸರ್ಕ್ಯುಲೇಟ್ ಮಾಡಿ, ಅಭ್ಯಾಸ ಮಾಡಿ ಸಲಹೆ ಕೊಡಿಯೆಂದು ಕೇಳಿಲ್ಲವೆ ? ಆಗ ಒಂದು ಸರ್ಕ್ಯುಲರ್ ಅನ್ನು ಸ್ಪಷ್ಟವಾಗಿ ಣಿವಾರು ಪ್ರಕಾರ ೫೦ ಕಡಿಮೆ ಇರಬೇಕು. ಅಕ್ಟೋಬರ್ ೨-೧೯೯೦ಕ್ಕೆ ಆವನು ಡಿಫಾಲ್ಟರ್ ಆಗಿರಬಾರದು, ಸುಸ್ತಿದಾರ ಆಗಿರಬೇಕು, ಅಂತಹವನಿಗೆ ಮಾತ್ರ ಇದು ಅನ್ಯಾಯವಾಗುತ್ತದೆನ್ನುವ ಮಾತನ್ನು ಹೇಳಿದ್ದಾರೆ. ಅದರಿಂದ ಈ ಯೋಜನೆಯಲ್ಲಿ ಕೇವಲ ೪೦ ಕೋಟಿ ರೂ ಸಹ ಈ ಸರ್ಕಾರದ ಮೇಲೆ ಬೀಳುವುದಿಲ್ಲ. ಹಾಗಿರಬೇಕಾದರೆ ಈ ರಾಜ್ಯದ ಜನತೆಯ ಕಣ್ಣಿಗೆ ಮಣ್ಣೆರಚುವಂತಹ, ನಾನು ೧೨೦ ಕೊಡಬೇಕು, ಕೇಂದ್ರ ಸರಕಾರ ೧೨೦ ಕೋಟಿ ಕೊಡಬೇಕು ಎಂಬ ಮಾತನ್ನು ಏಕೆ ಹೇಳಿದ್ದೀರಿ. ಎರಡನೆಯದಾಗಿ ಬೇರೆ ಬೇರೆ ರಾಜ್ಯ ಸರಕಾರಗಳು ಈ ಯೋಜನೆಗೆ ಕೊಳ್ಳದೆ ಕೇಂದ್ರ ಸರಕಾರದ ಮನ ಒಲಿಸುವ ದೃಷ್ಟಿಯಿಂದ, ಡಿಫಾಲ್ಟರ್ ಅಲ್ಲ, ಸಾಲ ತೆಗೆದುಕೊಂಡಿದ್ದರೆ ಸಾಕು, ಅವರೆಲ್ಲರಿಗೂ ಅನುಕೂಲ ಮಾಡಿಕೊಡುತ್ತೇವೆ ಎಂಬ ಮಾತನ್ನು ಹೇಳಿದ್ದಾರೆ.

ಶ್ರೀ ಕೆ ಹೆಚ್. ಪಾಟೀಲ್ (ರೆವಿನ್ಯೂ ಸಚಿವರು).— ಪಾಯಿಂಟ್ ಆಫ್ ಆರ್ಡರ್ ಈಗಾಗಲೇ ಮುಗಿದು ಹೋದ ವಿಷಯವನ್ನು ತಿರುಗ ಮುರುಗ ಎತ್ತುವುದರಿಂದ ಏನಾಗುತ್ತದೆ ಈ ರೀತಿ ಕೇಳಿದರೆ ಹೇಗೆ ?

ಶ್ರೀ ಬಿ. ಎಸ್. ಯಡಿಯೂರಪ್ಪ — ರಾಜ್ಯದ ರೈತ ತಪ್ಪು ತಿಳಿದುಕೊಂಡಿದ್ದಾನೆ. ನೀವು ಏನು ಮಾಡಿದ್ದೀರಿ ಅದು ರಾಜ್ಯದ ರೈತನಿಗೆ ಗೊತ್ತಾಗಿಲ್ಲ ನೀವು ಏನು ಮಾಡಿದ್ದೀರಿ ಎಂಬುದು ಈ ಸದನದ ರೆಕಾರ್ಡ್‌ಗೆ ಹೋಗಲಿ, ಪತ್ರಿಕೆಗಳ ಮೂಲಕ ಹೋಗಲಿ ಎಂದು ಹೇಳುತ್ತಿದ್ದೇನೆ. ನನ್ನ ಸಾಲ ಮನ್ನಾ ಆಯಿತು ಎಂದು ರೈತ ನಿನ್ನೆ ಹಾಲು ಕುಡಿದು ಬಿಟ್ಟಿದ್ದಾನೆ.

ಅಧ್ಯಕ್ಷರು.— ಕುಳಿತುಕೊಳ್ಳಿ ಅವರು ಏನು ಹೇಳುತ್ತಾರೆ ಹೇಳಲಿ.

ಶ್ರೀ ಕೆ. ಹೆಚ್. ಪಾಟೀಲ್.— ಈ ವಿಚಾರದ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಉತ್ತರ ಕೊಡುವಾಗ ಎಂಕಿ ಸಂಖ್ಯೆ ಏನು ಕೊಟ್ಟಿದ್ದಾರೆ ಅವರಲ್ಲಿ ಎಂಟು ಆಣೆ ಹೆಚ್ಚು ಆಗಿರಬಹುದು, ಎಂಟು ಆಣೆ ಕಡಿಮೆ ಆಗಿರಬಹುದು, ಅದನ್ನು ಆಫೀಸರುಗಳು ಮಾಡುತ್ತಾರೆ. ಆಫೀಸರ್‌ಗಳು ನೀಡಿದ ಅಂಶಕ್ಕೆ ಅನುಗುಣವಾಗಿ ಅವರು ಕೊಟ್ಟಂಥ ವಿವರಣೆಯನ್ನು ಮಾನ್ಯ ಸದಸ್ಯರು ನೋಡಿದ್ದಾರೆ. ತಿರುಗ ಮುರುಗ ಇದೇ ವಿಷಯ ಎತ್ತಿದರೆ ಹೇಗೆ ಆಗುತ್ತದೆ ? ಈವತ್ತು ಈ ವಿಷಯದಲ್ಲಿ ನಾವು ವಿರುದ್ಧ ಅಭಿಪ್ರಾಯ ವ್ಯಕ್ತ ಮಾಡಿದೆವು ಎಂದರೆ, ಚೀಫ್ ಮಿನಿಸ್ಟರ್‌ರವರದ್ದು ಒಂದು ಅಭಿಪ್ರಾಯ, ನಮ್ಮದು ಇಂದು ಅಭಿಪ್ರಾಯ ಆಗಬಹುದೇ ? ಇದರ ಬಗ್ಗೆ ತಿರುಗ ಮುರುಗ ಏತಕ್ಕೆ ವಿಚಾರ ಮಾಡುತ್ತೀರಿ. It has given a full stop there yesterday. ಇದನ್ನು ತಿಳಿದುಕೊಂಡು ಮಾನ್ಯ ಸದಸ್ಯರು ಮುಂದುವರಿಯುತ್ತಾರೆ ಎಂದು ನಾನು ಆಶೆ ಮಾಡುತ್ತೇನೆ

† ಶ್ರೀ ಕೆ.ಹೆಚ್.ರಂಗನಾಥ್(ಶಿಕ್ಷಣ ಸಚಿವರು)—ಮಾನ್ಯ ಅಧ್ಯಕ್ಷರೇ, ಈ ಸದನದ ಎಲ್ಲಾ ಸದಸ್ಯರೂ ಕೂಡಾ ಪ್ರಸ್ತಾಪ ಮಾಡಿದ್ದಾರೆ. ಭಾರತೀಯ ಜನತಾ ಪಕ್ಷದ ಸದಸ್ಯರು ಏನು ಕಾರ್ಯಕ್ರಮ ಪ್ರಾರಂಭ ಮಾಡಿದ್ದಾರೆ ಅದು ಸರಿಯಲ್ಲ, ಹಾಗೆ ಮಾಡಬೇಡಿ, ತಮ್ಮ ಸ್ಥಾನದಲ್ಲಿ ಕುಳಿತುಕೊಳ್ಳಿ ಎಂದು ಮನವಿ ಮಾಡಿದ್ದಾರೆ. ವಿರೋಧ ಪಕ್ಷದ ಉಪನಾಯಕರಾದ ಸಿಂಧ್ಯರವರು ಕೂಡಾ ಪ್ರಸ್ತಾಪ ಮಾಡಿದ್ದಾರೆ. ಸ್ವಾಮಿ ಯಡಿಯೂರಪ್ಪನವರು ಭಾರತೀಯ ಜನತಾ ಪಕ್ಷಕ್ಕೆ ಸೇರಿದವರು. ಸಂಸದೀಯ ಸಂಪ್ರದಾಯಗಳನ್ನು ಅನುಷ್ಠಾನಕ್ಕೆ ತರುವುದರಲ್ಲಿ ಬಹಳ ಪ್ರಮುಖವಾಗಿರತಕ್ಕಂಥ ಒಂದು ಪಕ್ಷ ಅದು. ನಾವು ದಿನದ ಮೊದಲನೇ ಘಂಟೆ ಮಿನಿದೆ ಅದು ಪ್ರಶ್ನೋತ್ತರದ ಸಮಯ ಎಂದು ರೂಲ್ಸ್‌ನಲ್ಲಿ ನಮೂದಾಗಿದೆ. ಅದಕ್ಕೆ ಅಡ್ಡಿಪಡಿಸಲಿಕ್ಕೆ ಯಾರಿಗೂ ಆಗುವುದಿಲ್ಲ. ಹಾಗೂ ಇಡೀ ಸದನದ ಎಲ್ಲಾ ಸದಸ್ಯರಿಗೂ ಸಹ ಅದು ಸೇರಿರತಕ್ಕಂಥಾದ್ದು ಅದನ್ನು ಮೊಟಕು ಮಾಡತಕ್ಕದ್ದು ಸರಿಯಲ್ಲ. ಇವತ್ತು ಅವರು ಈ ವಿಚಾರ ಪ್ರಸ್ತಾಪ ಮಾಡಬೇಕಾಗಿದ್ದರೆ ಕೊಶ್ಚನ್ ಹವರ್ ಆದನಂತರ ಪ್ರಸ್ತಾಪ ಮಾಡಬಹುದು. ಕೊಶ್ಚನ್ ಹವರ್ ಆನಮೇಲೆ ತಮ್ಮ ಗಮನಕ್ಕೆ ತಂದಿದ್ದರೆ

†ಈ ಚಿಹ್ನೆ ಮಾನ್ಯ ಸದಸ್ಯರ ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ

ಆದು ಬೇರೆ ವಿಚಾರ. ಎರಡನೆಯೆದು ದಿನನಿತ್ಯದಲ್ಲಿ ನಾವು ಈ ತರಹ ಇಲ್ಲಿ ಕುಳಿತರೆ ಜನರಿಗೆ ಏನು ಫಲ ದೊರಕಿಸಿಕೊಡಬೇಕು, ಆದನ್ನು ದೊರಕಿಸಿಕೊಡತಕ್ಕ ಮೆಥಡ್ ಇದಲ್ಲ ನಾವು ಒಂದೊಂದುಸಲ ಕಾರಣಾಂತರದಿಂದ ಆವೇಶಕ್ಕೆ ಒಳಗಾಗಿ ಇಂತಹ ಕಾರ್ಯಕ್ರಮ ಕೈಗೊಳ್ಳುತ್ತೇವೆ. ನಾವು ದಿನನಿತ್ಯ ಇಂತಹ ಸಂಪ್ರದಾಯಗಳನ್ನು ಮುರಿಯುತ್ತಾ ಮುರಿಯುತ್ತಾ ಬಂದರೆ, ಪಾರ್ಲಿಮೆಂಟರಿ ಡೆಮಾಕ್ರೆಸಿ ಏನಿದೆ ಅದನ್ನು ಮೊಟಕು ಮಾಡುತ್ತಾ ಹೋದರೆ, ಇದರಿಂದ ಬೆಳೆಯತಕ್ಕಂಥಾದ್ದು ಏನು ಎಂಬುದನ್ನು ನಾವು ವಿಚಾರ ಮಾಡಬೇಕು. ತಾವು ಕಟುವಾಗಿ ಟೀಕೆ ಮಾಡಿ. ವಿಚಾರಗಳನ್ನು ಪ್ರಸ್ತಾಪ ಮಾಡಿ, ಖಂಡನೆ ಮಾಡಿ. ಮಾನ್ಯ ಮುಖ್ಯಮಂತ್ರಿಗಳು ಏನೂ ಪ್ರಸ್ತಾಪ ಮಾಡಿದ್ದಾರೆ. ಅದಕ್ಕೆ ವಿರುದ್ಧವಾಗಿ ನೀವು ಇದ್ದರೆ ಅಂಕಿ ಅಂಶಗಳನ್ನು ಇಡಿ. ಆದರೆ ಈ ಸದನದ ಮೊದಲನೇ ಗಂಟೆಯ ಹಕ್ಕು ಏನಿದೆ ಅದನ್ನು ಮೊಟಕು ಮಾಡುವುದು ಸರಿಯಲ್ಲ. ತಾವು ದಯವಿಟ್ಟು ಈ ಕಾರ್ಯಕ್ರಮ ಬಿಡಬೇಕು. ಪೋಡಿಯಂನಲ್ಲಿ ಬರತಕ್ಕದ್ದು ಎಲ್ಲಿಯವರೆಗೆ ಹೋಗಿದೆ ಎಂದರೆ ಇದರ ಅನುಕರಣೆ ಲೋಕಸಭೆಯಲ್ಲಿ ನಡೆಯುತ್ತಿದೆ. ಲೋಕಸಭೆಯಲ್ಲಿ ಬಹಳ ದಿವಸ ತಾವು ಇದ್ದವರು, ತಾವು ನೋಡಿದ್ದೀರಿ. ಇಪತ್ತು ಅಲ್ಲೂ ಕೂಡಾ ಪ್ರಾರಂಭ ಆಗುವುದಕ್ಕೆ ಹೊರಟಿದೆ. ನಾವು ಇಲ್ಲಿ ಇದನ್ನು ಸರಿಯಲ್ಲ ಎಂದು ಖಂಡನೆ ಮಾಡದೇ ಹೋದರೆ ಅಲ್ಲೂ ಕೂಡ ಇದು ತಪ್ಪುವುದಿಲ್ಲ. ನಾವು ಇಲ್ಲಿ ಕುಳಿತು ಒಳ್ಳೆಯ ಭಾಷೆಯನ್ನು ಬಳಸಿ, ಸರಕಾರವನ್ನು ಚಾಟಿಯಿಂದ ಹೊಡೆಯುವುದಕ್ಕೆ ಸಾಧ್ಯ ಇದೆ. ನನ್ನ ವಿನಯಪೂರ್ವಕವಾದ ವಿನಂತಿ ಏನೆಂದರೆ, ದಯವಿಟ್ಟು ಇದನ್ನು ತಾವು ಮಾಡಕೂಡದು. ಮತ್ತೆ ತದನಂತರ ಬೇಕಾದರೆ ತಾವು ಪ್ರಸ್ತಾಪ ಮಾಡಿ. ಮೊದಲನೆಯ ಘಂಟೆ ಇಡೀ ಸದನಕ್ಕೆ ಸೇರಿರತಕ್ಕದ್ದು. ಅದು ಸದನದ ಹಕ್ಕು. The question hour is most important and that is there in the Rules of Proceedure. ಅದನ್ನು ಮೊಟಕು ಮಾಡತಕ್ಕದ್ದು ಸರಿಯಲ್ಲ. ಅಧ್ಯಕ್ಷರೇ ತಾವೂ ಸಹ ಅಸಾಧಾರಣ ಪರಿಸ್ಥಿತಿ ಬಂದಾಗ ಈ ಸಭೆಯ ಅನುಮತಿಯನ್ನು ಪಡೆದು ತಾವು ಇದನ್ನು ರದ್ದು ಮಾಡತಕ್ಕ ಅವಕಾಶ ಇದೆಯೇ ಹೊರತು, ಬೇರೆ ಸದಸ್ಯರಿಗೆ, ಬೇರೆ ಕಾಲದಲ್ಲಿ ಇದನ್ನು ಮೊಟಕು ಮಾಡತಕ್ಕ ಹಕ್ಕು ಇಲ್ಲ. ದಯವಿಟ್ಟು ಇದನ್ನು ಮಾಡಬಾರದು. ನನ್ನ ವಿನಯಪೂರ್ವಕವಾದ ವಿನಂತಿ ಏನೆಂದರೆ ಇದನ್ನು ಇಲ್ಲಿಗೆ ನಿಲ್ಲಿಸಿ ತಮ್ಮ ಸ್ಥಳಗಳಿಗೆ ಹೋಗಿ ಕೊಶ್ಚನ್ ಹವರ್ ನಡೆಯುವುದಕ್ಕೆ ಅವಕಾಶ ಮಾಡಿಕೊಟ್ಟು, ತದನಂತರ ತಮ್ಮ ವಿಚಾರ ಪ್ರಸ್ತಾಪ ಮಾಡುವುದಾದರೆ ಒಳ್ಳೆಯದು. ತಾವು ಮೊದಲೂ ಪ್ರಸ್ತಾಪ ಮಾಡಿದ್ದೀರಿ. ಮುಖ್ಯಮಂತ್ರಿಗಳ ಹತ್ತಿರ ಪ್ರಸ್ತಾಪ ಮಾಡಿ ತಾವು ಇಲ್ಲಿಗೆ ಬಂದು ನಂತರ ಪ್ರಸ್ತಾಪ ಮಾಡಿ. ಬೇರೆ ರೂಪದಲ್ಲಿ ಪ್ರಸ್ತಾಪ ಮಾಡಿ. ಮಾನ್ಯ ಸಿದ್ಧಾರೂಢರವರು ಹೇಳಿದರು, ತಾವು ಜನಗಳಿಗೆ ತಿಳಿಸತಕ್ಕಂಥಾದ್ದನ್ನು ಈ ರೂಪದಿಂದ ತಿಳಿಸದೇ, ಹೊರಗಡೆ ಕೂಡಾ ತಿಳಿಸಬಹುದು. ಅದಕ್ಕೆ ಅವಕಾಶ ಇದೆ. ಅಷ್ಟನ್ನು ಮಾಡಬೇಕೆಂದು ಕೇಳುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಹಿರಿಯ ಸಚಿವರಾದ ರಂಗನಾಥ್‌ರವರು ಹೇಳಿದಂಥ ಮಾತು ನನಗೆ ಸಂಪೂರ್ಣವಾಗಿ ಒಪ್ಪಿಗೆ ಇದೆ. ಇದಕ್ಕೆ ಭದ್ಧವಾಗಿ ನಡೆದುಕೊಳ್ಳದಿದ್ದರೆ, ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಕಟ್ಟುವುದಕ್ಕೆ ಸಾಧ್ಯವಾಗುವುದಿಲ್ಲ. ವಿಶೇಷ ಸಂದರ್ಭ ಬಂದಿರುವುದರಿಂದ ಅನಿವಾರ್ಯವಾಗಿ ಈ ಕಾರ್ಯಕ್ರಮ ತೆಗೆದುಕೊಳ್ಳಬೇಕಾಯಿತು. ನಾಲ್ಕು ಕೋಟಿ ಜನತೆಯ ಪ್ರತಿನಿಧಿಗಳಾಗಿ ನಾವು ಇಲ್ಲಿ ಬಾದು. ಯಾವ ಒಂದು ಸ್ಕೀಮ್ ಈ ರಾಜ್ಯದ ಜನತೆಗೆ ಅನುಕೂಲ ಆಗುವುದಿಲ್ಲ ಎಂದು ಸ್ಪಷ್ಟ ಆದಾಗ, ಇದರ ಬಗ್ಗೆ ಚರ್ಚೆ ಮಾಡಿ ಕೇಂದ್ರ ಸರಕಾರಕ್ಕೆ ಪುನರಪಟ್ಟು ಮಾಡುವ ಯಾವುದೇ ಪ್ರಾಮಾಣಿಕ ಪ್ರಯತ್ನವನ್ನು ಮಾಡದಿದ್ದರೆ ಹೇಗೆ ? ೧೭ ಜನ ಗೆದ್ದು ಬಂದಿರತಕ್ಕಂಥ ಕಾಂಗ್ರೆಸ್ ಪಕ್ಷದ ಶಾಸಕರುಗಳು, ಕಾಂಗ್ರೆಸ್ ಪಕ್ಷದ ಸರಕಾರ, ಇದನ್ನು ಮಾಡದಿರತಕ್ಕಂಥ ಸಂದರ್ಭದಲ್ಲಿ ಬೇರೆ ಮಾರ್ಗ ಇಲ್ಲದೆ ಈ ರೀತಿ ಮಾಡಬೇಕಾಗಿದೆ. ರೈತನ ಪರವಾಗಿ ಆಗತ್ಯ ಬಂದರೆ ನಮ್ಮ ಶಾಸಕ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ಬೀದಿಗೆ ಹೋಗುವುದಕ್ಕೂ ನಾವು ಸಿದ್ಧರಿದ್ದೇವೆ. ರೈತರ ಹತ್ತಿರ ಹೋಗುವುದಕ್ಕೆ ಸಿದ್ಧರಿದ್ದೇವೆ. ಇದು ಅನಿವಾರ್ಯ ಸಂದರ್ಭ. ೩೧ನೆ ತಾರೀಖಿನವರೆಗೆ ಇಲ್ಲಿ ಧರಣಿ,೩೧ನೇ ತಾರೀಖಿ ನಂತರ ಮುಖ್ಯಮಂತ್ರಿಗಳ ಮನೆ ಮುಂದೆ ಟೆಂಟ್ ಹಾಕಿಕೊಂಡು ಇನ್ನೂ ಎಷ್ಟು ತಿಂಗಳು ಬೇಕಾದರೂ ಕುಳಿತುಕೊಳ್ಳುವುದಕ್ಕೆ ಸಿದ್ಧರಿದ್ದೇವೆ. ಇಡೀ ರಾಜ್ಯದಲ್ಲಿ ಕಳೆದ ನಾಲ್ಕು ತಿಂಗಳಿಂದ ಸುಮಾರು ೬೫೦ ಸಭೆಗಳಾಗಿರಬಹುದು. ಹತ್ತಾರು ಸಾವಿರ ಜನ ಸೇರಿದ್ದರು. ಮುಖ್ಯಮಂತ್ರಿಗಳಿಗೆ ಎಲ್ಲಾ ವರದಿ ಕೊಟ್ಟಿದ್ದೇನೆ. ಮುಖ್ಯಮಂತ್ರಿಗಳ ಹತ್ತಿರ ಪರ್ಸನಲ್ ಆಗಿ ಮಾತನಾಡಿದ್ದೇನೆ. ಪತ್ರಿಕೆಯಲ್ಲಿ ಬಂದಿದೆ. ಹೀಗಿದ್ದರೂ ಕೂಡಾ ಈ ಸ್ಕೀಮ್ ಸರಿಯಲ್ಲ. ಈ ನಾಲ್ಕು ಕೋಟಿ ಜನತೆಯ ಪ್ರತಿನಿಧಿಗಳಾಗಿ ನಾವು ಅಲ್ಲದೆ ಯಾರು ಇದನ್ನು ಮಾಡಬೇಕು ಕೇಂದ್ರ ಸರ್ಕಾರ ತಪ್ಪು ಮಾಡಿದೆ ಎನ್ನುವುದನ್ನು ಕೇಂದ್ರ ಸರಕಾರಕ್ಕೆ ಬೆಟ್ಟು ಮಾಡಿ ತೋರಿಸುವ ಪ್ರಯತ್ನ ಈ ಸದನದಲ್ಲಿ ಆಗಬೇಕು. ಇದರ ಬಗ್ಗೆ ಚರ್ಚೆ ಆಗಲ್ಲ. ಕೇಂದ್ರ ಸರಕಾರ

ತಪ್ಪು ಮಾಡಿದೆ ಎಂಬುದನ್ನು ಕೇಂದ್ರ ಸರಕಾರಕ್ಕೆ ಬೆಟ್ಟು ಮಾಡಿ ತೋರಿಸುವ ಪ್ರಾಮಾಣಿಕ ಪ್ರಯತ್ನ ನಾವು ಮಾಡುತ್ತಿದ್ದೇವೆ ಸ್ವಾಮಿ

ಅಧ್ಯಕ್ಷರು.—ಮಾನ್ಯ ಸದಸ್ಯರು ದಯಮಾಡಿ ಕುಳಿತುಕೊಳ್ಳಬೇಕು. ನಾನು ಅರ್ಥ ಮಾಡಿಕೊಂಡ ರೀತಿಯಲ್ಲಿ ತಾವು ಕೇಂದ್ರ ಸರ್ಕಾರದವರು ಏನು ಸ್ಕೀಮನ್ನು ಮಾಡಿದ್ದಾರೆ. ಅದರಲ್ಲಿ ಮೂಲಭೂತವಾದಂಥ ತಪ್ಪು ನಡೆದಿದೆ ಎನ್ನುವುದು ತಮ್ಮ ಅಭಿಪ್ರಾಯ ? ಕೇಂದ್ರ ಸರಕಾರದ ನಿರ್ಧಾರಗಳಿಗೆ ರಾಜ್ಯ ಸರಕಾರ ಯಾವ ರೀತಿ ಹೊಣೆಯಾಗುತ್ತದೆ ಎಂಬುದು ಒಂದು, ಎರಡನೆಯ ಪ್ರಶ್ನೆ ಕೇಂದ್ರ ಸರಕಾರ ಮಾಡುವ ತಪ್ಪುಗಳನ್ನು ಸರಿಪಡಿಸತಕ್ಕಂಥ ದೊಡ್ಡ ಚಾವಟಿಯನ್ನು ತಮ್ಮ ಕೈಯಲ್ಲಿ ಹಿಡಿದುಕೊಂಡು ನಿಸ್ಸಾಹಾಯಕರಾಗಿ ಬಂದು ಈ ಸದನದ ಮುಂದೆ ಧರಣಿ ಮಾಡುತ್ತಾ ಇದ್ದೀರಲ್ಲ, ಇದರಲ್ಲಿ ಬುದ್ಧಿವಂತಿಕೆ ಇದೆಯೇ ? ಮುಂದಾಳುತನ ಇದೆಯೇ ? ದಯವಿಟ್ಟು ತಾವುಗಳು ಯೋಚನೆ ಮಾಡಬೇಕು.

ಶ್ರೀ ಬಿ. ಎಸ್. ಯಡಿಯೂರಪ್ಪ —ಕೇಂದ್ರ ಸರಕಾರ ಮೊದಲು ಸಹಕಾರ ಸಂಘದ ಸಾಲದಲ್ಲಿ ೫೦ ಪರ್‌ಸೆಂಟ್ ಕೊಡುವುದಕ್ಕೂ ಕೂಡ ಒಪ್ಪಲಿಲ್ಲ. ಅದನ್ನು ಒಪ್ಪಿಸುವಂಥ ಪ್ರಯತ್ನವನ್ನು ಮಾಡಿದೆವು, ಈ ಕಾನೂನು ಮಾಡುವಾಗ ತಪ್ಪಾದಂಥ ಸಂದರ್ಭದಲ್ಲಿ ಈ ಸದನಕ್ಕೆ ಸರಿ ಮಾಡುವಂಥ ಪೂರ್ಣವಾದ ಅಧಿಕಾರ ಇದೆ. ಈ ರಾಜ್ಯದ ರೈತರಿಗೆ ದ್ರೋಹ ಮಾಡುತ್ತಾ ಇದ್ದೀರಿ, ಇದು ಸರಿಯಲ್ಲ. ಈ ರೀತಿಯಾಗಿ ಮಾಡಿ, ಅದಕ್ಕೆ ನಾವು ಸಹಕಾರ ಕೊಡುವುದಕ್ಕೆ ಸಿದ್ಧರಿದ್ದೇವೆ. ೧೯೮೯ರ ವರೆಗೆ ಮಾಡಿರುವಂಥ ಸಾಲಗಾರ, ಅವನು ಸುಸ್ತಿದಾರ ಆಗದಿದ್ದರೂ ಅಡ್ಡಿ ಇಲ್ಲ ಯಾರು ಪ್ರಾಮಾಣಿಕವಾಗಿ ಸಾಲ ಕಟ್ಟಿದ್ದಾರೆ ಆ ಕಡುಬಡವರಿಗೂ ಕೂಡ ಈ ಸವಲತ್ತು ಸಿಗುತ್ತಾ ಇಲ್ಲ, ಇದನ್ನು ಮಾಡಬೇಕೆಂದು ಈ ಸದನ ಕೇಂದ್ರ ಸರಕಾರವನ್ನು ಒಕ್ಕೊರಲಿನಿಂದ ಕೇಳಬೇಕಾಗುತ್ತದೆ ಅದನ್ನು ನಮ್ಮ ಕರ್ತವ್ಯ ಎಂದು ತಿಳಿದುಕೊಳ್ಳಬೇಕಾಗುತ್ತದೆ ೪ ಕೋಟಿ ಜನರ ಪ್ರತಿನಿಧಿಗಳಾಗಿರತಕ್ಕಂಥ ನಾವು ಅದನ್ನು ಮಾಡಿಲ್ಲ. ಹಾಗೆಯೇ ಈ ಬಗ್ಗೆ ಬೇರೆ ಬೇರೆ ರಾಜ್ಯಗಳವರು ಮುಂದೆ ಬಂದಿದ್ದಾರೆ. ಎಲ್ಲಿ ನಮ್ಮ ಸರಕಾರಗಳು ಇವೆ, ಅಲ್ಲಿ ನಾವು ಮಾಡಿದ್ದೇವೆ. ಕೇಂದ್ರ ಸರಕಾರದ ಸಹಾಯವನ್ನು ಪಡೆದಿದ್ದೇವೆ. ಕೇಂದ್ರದವರಿಗೆ ಕನ್ವಿನ್ಸ್ ಮಾಡಿದ್ದೇವೆ. ಪ್ರಧಾನಿಯವರಿಗೆ ಕನ್ವಿನ್ಸ್ ಮಾಡಿದ್ದೇವೆ. ಲೋಪದೋಷಗಳನ್ನು ಹೇಳಿದ್ದೇವೆ...

ಶ್ರೀ ಕೆ. ಹೆಚ್. ಪಾಟೀಲ್.—ಮಾನ್ಯ ಯಡಿಯೂರಪ್ಪನವರು ಪದೇ ಪದೇ ಹೇಳುತ್ತಾ ಇದ್ದಾರೆ ನಾಲ್ಕು ಕೋಟಿ ಜನರ ಪ್ರತಿನಿಧಿಗಳು ನಾವು ಎಂದು. ನಾವೂ ಕೂಡ ಸ್ವತಃ ರೈತರ ಮಕ್ಕಳು ಯಡಿಯೂರಪ್ಪನವರು ಮಾತ್ರ ರೈತರ ಸಂಕಷ್ಟಗಳನ್ನು ಅರ್ಥಮಾಡಿಕೊಂಡಿದ್ದಾರೆಯೆ ? ರೈತರ ಮಕ್ಕಳಾಗಿ ನಾವುಗಳು ಕೂಡ ಯಾರಿಗೆ ಮೋಸ ಮಾಡುವುದಕ್ಕೆ ಸಾಧ್ಯ ? ಯಾರು ಚುನಾವಣಾ ಪ್ರಣಾಳಿಕೆಯಲ್ಲಿ ಹಾಕುವುದೊಂದು ಮಾಡುವುದೊಂದು ಮಾಡುತ್ತಾರೆ, ಅವರಿಗೆ ತಾವುಗಳು ಹೇಳ ಬಹುದು. ನಮ್ಮ ಪ್ರಣಾಳಿಕೆಯಲ್ಲಿ ಏನು ಆಶ್ವಾಸನೆಯನ್ನು ಕೊಟ್ಟಿದ್ದೇವೋ ಅದರ ಪ್ರಕಾರ ನಮ್ಮ ಮುಖ್ಯಮಂತ್ರಿಯವರು ಆಶ್ವಾಸನೆ ಕೊಟ್ಟಿದ್ದಾರೆ. ಇವೊತ್ತು ನಾವು ಅದಕ್ಕೆ ಬದ್ಧರಾಗಿದ್ದೇವೆ. ನೀವು ನಿಮ್ಮ ಪರ್ಚಸ್ಸನ್ನು ಬೀರಿ, ಕೇಂದ್ರಸರಕಾರವರಿಂದ ೫೦ ಪರ್‌ಸೆಂಟ್ ಹಣವನ್ನು ನಮಗೆ ಸಾಲವಾಗಿ ಕೊಡುವುದಕ್ಕೆ ಹೇಳಿ. ನಮ್ಮ ಮುಖ್ಯಮಂತ್ರಿಯವರು ಒಪ್ಪಿಕೊಂಡಿದ್ದಾರೆ, ಎಷ್ಟು ಆಗುತ್ತದೆ ಏನು ಆಗುತ್ತದೆ ಎಂಬ ಲೆಕ್ಕವನ್ನು ಅಧಿಕಾರಿಗಳು ಇಟ್ಟುಕೊಂಡಿದ್ದಾರೆ. ಅದೆಲ್ಲಾ ಮಂತ್ರಿಗಳು ಹೇಳುವುದಿಲ್ಲ. ಮುಖ್ಯಮಂತ್ರಿಗಳು ತತ್ವಶಃ ಒಪ್ಪಿದ ಮೇಲೆ ನೀವು ಏತಕ್ಕೆ ತಾತ್ವಿಕವಾಗಿ ಇದನ್ನು ವಿರೋಧ ಮಾಡುತ್ತೀರಿ ? ಹಾಗೆಯೇ ನೀವು ಮಾತನಾಡುವಾಗ ನಾಲು ಕೋಟಿ ಜನರ ಪ್ರತಿನಿಧಿ ನಾವು ಎಂದು ಹೇಳುತ್ತಾ ಇದ್ದೀರಿ ? ಹಾಗಾದರೆ ನಾವುಗಳು ಜನರ ಪ್ರತಿನಿಧಿಗಳು ಅಲ್ಲವೆ? ನಮ್ಮ ನಿಮ್ಮಲ್ಲಿ ಏನೇ ಭಿನ್ನಾಭಿಪ್ರಾಯಗಳು ಇದ್ದಾಗ್ಯೂ ಕೂಡ ತಾವುಗಳು ರೈತರ ಬಗ್ಗೆ ಮಾತನಾಡುತ್ತಿರುವಾಗ ನಮ್ಮ ಕೆಲಸವನ್ನು ಇವರು ಕೂಡ ಮಾಡುತ್ತಾ ಇದ್ದಾರೆ ಎಂದು ಸುಮ್ಮನೆ ಕುಳಿತುಕೊಂಡಿದ್ದೇವೆ. ಈಗ ನಮ್ಮ ಮುಂದಿರುವ ಈ ಸಮಸ್ಯೆಯನ್ನು ಎಲ್ಲರೂ ಕೂಡಿ ವಿಚಾರ ಮಾಡೋಣ. ಮುಖ್ಯಮಂತ್ರಿಯವರು ಈ ವಿಚಾರದಲ್ಲಿ ಸ್ಪಷ್ಟವಾದ ನಿಲುವನ್ನು ತಳೆದಿದ್ದಾರೆ. ನೀವು ಹೋಗಿ ಕೇಂದ್ರ ಸರಕಾರಕ್ಕೆ ಹೇಳಿ ಬಡ್ಡಿ ಇಲ್ಲದ ಸಾಲವನ್ನು ಕೊಡಿಸಿ.

(ಗೊಂದಲ)

ಅಧ್ಯಕ್ಷರು.—ವಿಚಾರಗಳನ್ನೆಲ್ಲಾ ನಾವು ತಿಳಿದುಕೊಂಡಿದ್ದೇವೆ, ಚರ್ಚೆ ಮಾಡಿದ್ದೇವೆ. ನಾವು ದುಡುಕಿ ಯಾವುದೇ ನಿರ್ಧಾರವನ್ನು ತೆಗೆದುಕೊಳ್ಳಬಾರದು ಎಂದು ಎಲ್ಲರ ಅನಿಸಿಕೆಗಳಿಗೂ ಕೂಡ

ಅಭಿವ್ಯಕ್ತ ಮಾಡತಕ್ಕಂಥ ಅವಕಾಶವನ್ನು ನಾನು ಕಲ್ಪಿಸಿಕೊಟ್ಟಿದ್ದೇನೆ. ಹಾಗೆಯೇ ಎಲ್ಲಾ ಪಕ್ಷದ ಪ್ರತಿನಿಧಿಗಳೂ ಕೂಡ ತಮ್ಮ ಅಭಿಪ್ರಾಯಗಳನ್ನು ವ್ಯಕ್ತ ಮಾಡಿದ್ದಾರೆ. ಸದನ ನಡೆಯಬೇಕಾಗುತ್ತದೆ. ಸದನವು ಬಹುಮತದ ಅಭಿಪ್ರಾಯಗಳನ್ನು ಗಮನಿಸಿ ನಾವೇ ರೂಪಿಸಿರತಕ್ಕಂಥ ಕಾರ್ಯಕಲಾಪಗಳ ಚೌಕಟ್ಟಿನಲ್ಲಿ, ನಿಯಮಗಳ ಚೌಕಟ್ಟಿನಲ್ಲಿ ನಾವು ಸಭೆಯನ್ನು ನಡೆಸಬೇಕಾಗುತ್ತದೆ. ಅದನ್ನು ಅಡ್ಡಿ ಮಾಡತಕ್ಕಂಥಾದ್ದು ಪ್ರಜಾಪ್ರಭುತ್ವದ ನಿಯಮಗಳಿಗೆ ವಿರುದ್ಧವಾಗುತ್ತದೆ. ಈ ವಿಷಯದಲ್ಲಿ ನಾವು ಪಾರ್ಲಿಮೆಂಟರಿ ಸಂಪ್ರದಾಯಗಳಿಗೆ ತಿಲಾಂಜಲಿ ಕೊಡುವುದು ಸರಿಯಲ್ಲ. ಶ್ರೀ ಯಡಿಯೂರಪ್ಪನವರು ಈ ಸದನದ ಹಿರಿಯರು ಅವರನ್ನು ಅತ್ಯಂತ ಕಳಕಳಿಯಿಂದ ಭಿನ್ನವಿಸಿಕೊಳ್ಳುತ್ತೇನೆ, ನೀವು ಚಳವಳಿಯ ಮಾರ್ಗವನ್ನು ಹಿಡಿಯುವುದು ಪ್ರಜಾಪ್ರಭುತ್ವದಲ್ಲಿ ನಿಮಗಿರುವ ಹಕ್ಕು ಅದನ್ನು ಚಲಾಯಿಸುವ ವೇದಿಕೆ ಮಾತ್ರ ಬೇರೆ, ಇದಲ್ಲ. ಜನಾಭಿಪ್ರಾಯವನ್ನು ರೂಪಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೀರಿ, ಅದೇ ಧಾಟಿಯಲ್ಲಿ ಮುಂದೆ ಹೋಗಲು ನಿಮಗೆ ಅವಕಾಶಗಳಿವೆ. ಆದರೆ ಈ ಸದನದ ಕಾರ್ಯಕಲಾಪಗಳನ್ನು ಅಡ್ಡಿ ಮಾಡುವುದರಿಂದ ನೀವು ರೈತರಿಗೆ ಯಾವ ವಿಧವಾದ ಅನುಕೂಲತೆಗಳನ್ನೂ ಮಾಡಿಕೊಡುತ್ತಿಲ್ಲವೆಂಬುದನ್ನು ತಾವು ಗಮನಿಸಬೇಕು. ಈಗ ಪ್ರಶ್ನೋತ್ತರ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಅವರು ಈ ಮಾತು ಹೇಳಿ ರಾಜೀನಾಮೆ ಕೊಟ್ಟು ಚುನಾವಣೆಗೆ ನಿಂತ್ರೆ ಗೆದ್ದು ಬರಲಿ ಸ್ವಾಮಿ, ಜನ ಪಾಠ ಕಲಿಸುತ್ತಾರೆ.

(ಗೊಂದಲ)

(ಯಡಿಯೂರಪ್ಪನವರು ಮತ್ತೆ ಧರಣಿ ಕುಳಿತರು)

ಪ್ರೊ. ಎಂ. ಡಿ. ನಂಜುಂಡಸ್ವಾಮಿ.—ಸ್ವಾಮಿ ನನ್ನ ೨೭೦ನೇ ಸಂಖ್ಯೆ ಪ್ರಶ್ನೆ ಕೇಳುವ ಮೊದಲು ಪ್ರಶ್ನೋತ್ತರಕ್ಕೆ ಸಂಬಂಧಿಸಿದಂತೆ ಸ್ಪಷ್ಟೀಕರಣ ಬೇಕು.

ಶ್ರೀ ವಾಟಾಳ್ ನಾಗರಾಜ್.—ನಾನು ಆಗಲೇ ಒಂದು ಸಲಹೆ ಕೊಟ್ಟೆ, ಅಧ್ಯಕ್ಷರು ಅದನ್ನು ಗಮನಿಸಿದ್ದೀರೋ ಇಲ್ಲವೋ ಗೊತ್ತಾಗಲಿಲ್ಲ. ಏಕೆಂದರೆ ತಮ್ಮ ಕಾರ್ಯಾಲಯದಲ್ಲಿ ಏನಾದರೂ ಈ ಧರಣಿ ಬಗ್ಗೆ ಮಾಡಬೇಕು ಸ್ವಾಮಿ. ನನಗೆ ಗೊತ್ತು ತಮಗೆ ಅಧಿಕಾರ ಇದೆ.

ಅಧ್ಯಕ್ಷರು.—ಅಧಿಕಾರ ನನಗಿಲ್ಲ, ಸಭೆಗಿದೆ.

ಶ್ರೀ ವಾಟಾಳ್ ನಾಗರಾಜ್.—೧೮ ನಿಮಿಷದಲ್ಲಿ ತೀರ್ಮಾನ ತೆಗೆದುಕೊಳ್ಳಬಹುದು. ಈ ರೀತಿ ಧರಣಿ ಕುಳಿತಾಗ ನಾವು ಸಭೆ ನಡೆಸುವುದು ಸರಿಯೇ ತಮಗೆ ಬಿಟ್ಟಿದ್ದು ದು.

ಶ್ರೀ ಕಾಗೋಡು ತಿಮ್ಮಪ್ಪ.—ಅಧ್ಯಕ್ಷರೇ, ಯಡಿಯೂರಪ್ಪನವರು.....

MR. SPEAKER.—That is over. Please do not raise that issue again.

ಪ್ರೊ. ಎಂ. ಡಿ. ನಂಜುಂಡಸ್ವಾಮಿ.—ನಾನು ಕಳಂಹಿಸುವ ಎಲ್ಲಾ ಪ್ರಶ್ನೆಗಳ ಕಾರ್ಬನ್ ಕಾಪಿ ಗಳನ್ನು ನಾನು ಇಟ್ಟುಕೊಂಡಿದ್ದೇನೆ ಆದರೆ ಕಳೆದ ಅಧಿವೇಶನ ಮತ್ತು ಈ ಅಧಿವೇಶನಗಳಲ್ಲಿ ನಾನು ಕಳಂಹಿಸಿದ ಪ್ರಶ್ನೆಗಳು ಬದಲಾಗುತ್ತಿವೆ.

ಅಧ್ಯಕ್ಷರು.—ವಿಕೃತವಾಗಿದೆ ಎಂದು ನಿಮ್ಮ ಅಭಿಪ್ರಾಯವೇ?

ಪ್ರೊ. ಎಂ. ಡಿ. ನಂಜುಂಡಸ್ವಾಮಿ.—ಹಾದು. ಕಳೆದ ಅಧಿವೇಶನದಲ್ಲಿ ಗಣಿ ಮತ್ತು ಭೂಗರ್ಭ ಇಲಾಖೆ ಕುರಿತು ೮೦ರಿಂದ ೯೦ರವರೆಗೆ ನಮ್ಮ ಗಣಿ ಗುತ್ತಿಗೆದಾರರು ಕೊಡಬೇಕಾಗಿರುವ ರಾಯಲ್ಟಿ ಬಾಕಿ ಎಷ್ಟು ಎಂದಿದ್ದಕ್ಕೆ ೭೮ರಿಂದ ೯೦ರವರೆಗೆ ಎಂದು ಯಾರೋ ಆಡಿಷನಲ್ ಸೆಕ್ರೆಟರಿ ಅಂತೆ ಅವರು ಉತ್ತರ ಕೊಡಿಸಿದ್ದಾರೆ. ಮತ್ತೆ ಇವತ್ತು ಕಳೆದ ೧೦ ವರ್ಷಗಳಿಂದ ರೋಗಗ್ರಸ್ತ ಕೈಗಾರಿಕೆಗಳೆಂದು ರಾಜ್ಯಸರ್ಕಾರ ಪರಿಗಣಿಸಲಾದ ಕೈಗಾರಿಕೆಗಳೆಷ್ಟು ಎಂದು ಕೇಳಿ ಕಾರ್ಬನ್ ಕಾಪಿ ಇಟ್ಟುಕೊಂಡಿದ್ದೆ, ಆದರೆ ಇವತ್ತು ಅದು ೮೮ರಿಂದ ೯೦ ಎಂದು ಆಚ್ಚಾಗಿದೆ. ಅಂದರೆ ನಾವು ಏನು ಅರ್ಥಮಾಡಿಕೊಳ್ಳಬೇಕು? ಮತ್ತೆ ಎರಡನೇ ಪ್ರಶ್ನೆಯಲ್ಲಿ ಕಳೆದ ೧೦ ವರ್ಷಗಳಿಂದ ವಿವಿಧ ಹಣಕಾಸು ಸಂಸ್ಥೆಗಳಿಂದ ಸಾಲ ರದ್ದುಮಾಡಿದ ಮೊಬಲಗು ಎಷ್ಟು ಎಂದು ಕೇಳಿದ್ದರೆ ಇವರು ಬರೀ ಎರಡು ವರ್ಷದ್ದು ಮಾತ್ರ ಕೊಟ್ಟಿದ್ದಾರೆ.

ಅಧ್ಯಕ್ಷರು.—ನಿಮ್ಮ ಮೂಲ ಪ್ರಶ್ನೆಯನ್ನು ನೋಡಿದ್ದೇನೆ. ತಾವು ೮೦ರಿಂದ ೯೦ರವರೆಗೆ ರಾಜ್ಯಸರ್ಕಾರ ಪರಿಗಣಿಸಿದ ರೋಗಗ್ರಸ್ತ ಕೈಗಾರಿಕೆಗಳ ಸಂಖ್ಯೆ ಎಷ್ಟೆಂದು ಕೇಳಿದ್ದೀರಿ ಅದಕ್ಕೆ ನಮ್ಮ

ಬುದ್ಧಿವಂತರು ಲೆ ಎಂದು ಮಾಡಿದ್ದಾರೆ. ಆದ್ದರಿಂದ ಇದು ತಪ್ಪಾಗಿದೆ. ಆ ಬುದ್ಧಿವಂತರ ಪರವಾಗಿ ನಿಮ್ಮಲ್ಲಿ ನಾನು ಕ್ಷಮೆ ಕೇಳಿಕೊಂಡು ನಿಮ್ಮ ಮೂಲ ಪ್ರಶ್ನೆಯನ್ನು ಇನ್ನೊಂದು ದಿವಸ ತೆಗೆದುಕೊಳ್ಳುತ್ತೇನೆ. ತಮ್ಮ ಮೂಲ ಪ್ರಶ್ನೆ ಯಾವ ರೀತಿ ಇದೆ ಆವೆ ರೀತಿ ಸರ್ಕಾರದಿಂದ ಉತ್ತರ ತರಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಪ್ರೊ ಎಂ. ಡಿ. ನಂಜುಂಡ ಸ್ವಾಮಿ— ಆಗಬಹುದು.

ಮಾರಾಟ ತೆರಿಗೆ, ಪ್ರವೇಶ ತೆರಿಗೆ, ವಹಿವಾಟು ತೆರಿಗೆ ವಸೂಲಿ ಕುರಿತಂ.

೩೮೦ ಶ್ರೀ ಬ್ಲೇಶಿಯಸ್ ಎಂ. ಡಿಸೋಜ. (ಮಂಗಳೂರು)—ಮಾನ್ಯ ಆರ್ಥಿಕ ಮತ್ತು ಅಬಕಾರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ೧೯೮೭-೮೮, ೧೯೮೮-೮೯, ಮತ್ತು ೧೯೮೯-೯೦ನೇ ಸಾಲಿನಲ್ಲಿ ವಸೂಲಿ ಮಾಡಿದ ಮಾರಾಟ ತೆರಿಗೆ, ಪ್ರವೇಶ ತೆರಿಗೆ, ಮತ್ತು ವಹಿವಾಟು ತೆರಿಗೆಯ ಒಟ್ಟು ಮೊತ್ತ ಪ್ರಮಾಣ?

ಶ್ರೀ ಎಂ. ರಾಜಶೇಖರ ಮೂರ್ತಿ (ಅರ್ಥ ಸಚಿವರು). —

ಅ) ೧೯೮೭-೮೮ರಿಂದ ೧೯೮೯-೯೦ರವರೆಗೆ ವಸೂಲಿ ಮಾಡಲಾದ ಮಾರಾಟ ತೆರಿಗೆ, ಪ್ರವೇಶ ತೆರಿಗೆ ಮತ್ತು ವಹಿವಾಟು ತೆರಿಗೆಯ ಒಟ್ಟು ಮೊತ್ತ ಈ ಕೆಳಕಂಡಂತಿರುತ್ತದೆ.

(ರೂ. ಕೋಟಿಗಳಲ್ಲಿ)

ವರ್ಷ	ಮಾರಾಟ ತೆರಿಗೆ	ಪ್ರವೇಶ ತೆರಿಗೆ	ವಹಿವಾಟು ತೆರಿಗೆ
೧೯೮೭-೮೮	೭೭೬.೦೯	೪೧.೪೭	೧೯.೬೩
೧೯೮೮-೮೯	೯೮೭.೬೪	೪೭.೪೧	೨೧ ೮೦
೧೯೮೯-೯೦	೧೦೮೯.೮೫	೫೭.೦೩	ಸಂಕಲನ ಸ್ಥಿತಿಯಲ್ಲಿರುವುದು

SRI BLACIUS M. D,SOUZA.—Sir. I would like to point out the following to the Hon'ble Minister for finance. In the year 1989–90 Rs. 1089 crores has been collected as Sales tax and Rs. 57–03 crores has been collected as Entry Tax. they have not shown the Turnover tax. When the octroi was abolished in 1979 a surcharge of 10% was added to the Sales Tax and the entry tax imposed and also the turnover tax was straihgtaway levied in lieu of octroi. From the figures we find that the total levy of taxes in lieu of octroi is Rs. 187.82 crores. but the Government has sanctioned only Rs 63 crores. I would like to ask the Government and the Finance Minister whether he is going to fill up the deficit of Rs 110 crores for the coming year in lieu of octroi to the corporations and municipalities?

SR. M. RAJASHEKARA MURTHY.—That is altogether a different question. He is speaking about devolution of funds of general exchequer to municipalities. It is nothing to do with this question If the hon'ble member tables another question, I will answer it.

MR. SPEAKER.—That does not come under the purview of this question. Hon.member has to table a different question.

SRI BLACIUS M. D.SOUZA.—Sir, the Finance Minister has given figures and as per the figares given by him the corporations and municipalities have to get Rs. 187.82 crores in lieu of octroi. but they are getting onlyRs.63 crores. I would like to know whether